

# ಯೋಗಪ್ರತಿಭೆ ತನ್ವಿತಾ

**ಹದಿನಾಲ್ಕರ ಪ್ರಾಯದ ತನ್ವಿತಾಳದು ಯೋಗ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಸಾಧನೆ. ನೂರಾರು ಪ್ರದರ್ಶನಗಳನ್ನು ನೀಡಿರುವ ಆಕೆ, ಕಿರಿಯ ವಯಸ್ಸಿನಲ್ಲೇ ಹತ್ತಾರು ಪುರಸ್ಕಾರಗಳಿಗೂ ಭಾಜನಳು.**

■ **ಮೌಲಾಲಿ ಕೆ. ಆಲಗೂರ**



ಉಡುಪಿಯ ತನ್ವಿತಾ ವಿ. ಎಂಟನೇ ತರಗತಿ ವಿದ್ಯಾರ್ಥಿನಿ. 14 ವರ್ಷದ ಈ ಬಾಲಕಿಯದು ಯೋಗಾಭ್ಯಾಸದಲ್ಲಿ ಅಂತರರಾಷ್ಟ್ರೀಯ ಸಾಧನೆ. ತನ್ವಿತಾ ಸದ್ಯ ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ 8ನೇ ತರಗತಿಯ ವಿದ್ಯಾರ್ಥಿನಿ.

ತಂದೆ ವಸಂತ ಮತ್ತು ತಾಯಿ ಪುಷ್ಪಲತಾ – ಇಬ್ಬರೂ ತನ್ವಿತಾ ಸಾಧನೆಗೆ ಬೆನ್ನೆಲುಬು. ಓದಿನಲ್ಲಿಯೂ ತನ್ವಿತಾ ತುಂಬಾ ಜಾಣೆ. ಭರತನಾಟ್ಯ, ಯಕ್ಷಗಾನ, ಅಭಿನಯ, ಕ್ರಿಕೆಟ್‌ಗಳಲ್ಲಿ ಆಸಕ್ತಿ–ಪರಿಶ್ರಮ. ಯೋಗ ಪ್ರದರ್ಶನದಲ್ಲಿ ಈಗಾಗಲೇ 30 ಚಿನ್ನ, 15 ಬೆಳ್ಳಿ ಹಾಗೂ 8 ಕಂಚಿನ ಪದಕ ತನ್ನದಾಗಿಸಿಕೊಂಡಿದ್ದಾಳೆ.

‘ಶ್ರೀ ಗುರುಕುಲಂ ಯೋಗ ಕೇಂದ್ರ’ದ ಶ್ರೀಧರ್ ಮೂರ್ತಿ ಮತ್ತು ಸಂಧ್ಯಾ ತನ್ವಿತಾಳ ಯೋಗ ಗುರುಗಳು. ಒಂದನೇ ತರಗತಿಯಲ್ಲಿರುವಾಗಲೇ ಚಿಂತನ ರಾಜ್ಯ ಮಟ್ಟದ ವಿಜ್ಞಾನ ಪರೀಕ್ಷೆಯಲ್ಲಿ ಚಿನ್ನದ ಪದಕ ಪಡೆದಿದ್ದ ಈ ಬಾಲಪ್ರತಿಭೆ, 2020ರಲ್ಲಿ ಅರುಣಾಚಲ ಪ್ರದೇಶದ ‘ಭಾರತೀಯ ವುಮೆನ್ ಒಲಿಂಪಿಕ್ ಅಸೋಸಿಯೇಷನ್’ ನಡೆಸಿದ 14 ವರ್ಷದೊಳಗಿನ ಬಾಲಕಿಯರ ವಿಭಾಗದ ಯೋಗಸ್ಪರ್ಧೆಯಲ್ಲಿ ಪ್ರಥಮ ಸ್ಥಾನದೊಂದಿಗೆ ಚಿನ್ನದ ಪದಕ ಪಡೆದಿದ್ದಾಳೆ. ‘ಇಂಟರ್ ನ್ಯಾಷನಲ್ ಯೋಗ ಒಲಿಂಪಿಕ್ – ಟರ್ಕಿ’ 2020ರಲ್ಲಿ ನಡೆಸಿದ ಆನ್‌ಲೈನ್ ಯೋಗ ಸ್ಪರ್ಧೆಯಲ್ಲಿ ಒಂದು ಚಿನ್ನ ಮತ್ತು ಒಂದು ಬೆಳ್ಳಿ ಪದಕ ಪಡೆದಿದ್ದಾಳೆ. ದೇಶದ ವಿವಿಧ ಸಂಘಟನೆಗಳು ಆಯೋಜಿಸಿದ ಯೋಗಸ್ಪರ್ಧೆಗಳಲ್ಲಿ ಗೆದ್ದಿರುವ ಈ ಪುಟಾಣಿ, ನೂರಾರು ಯೋಗ ಪ್ರದರ್ಶನಗಳನ್ನು ನೀಡಿದ್ದಾಳೆ.

ತನ್ವಿತಾ ಒಳ್ಳೆಯ ಕಲಾವಿದೆಯೂ ಹೌದು. ಝೀ ವಾಹಿನಿಯ ‘ಡ್ರಾಮಾ ಜ್ಯೂನಿಯರ್ಸ್’ನ ಸೀಸನ್ 3ರಲ್ಲಿ ಅತಿಥಿ ಕಲಾವಿದೆಯಾಗಿ ಭಾಗವಹಿಸಿದ್ದಾಳೆ. ‘ಕ್ರಾಂತಿ’, ‘ಚಿಕ್ಕಿಯ ಮೂಗುತಿ’ ಹಾಗೂ ‘ತನುಜಾ’ ಎಂಬ ಕನ್ನಡ ಸಿನಿಮಾಗಳಲ್ಲಿ ಅಭಿನಯಿಸಿದ್ದಾಳೆ. ತಮಿಳಿನ ಒಂದು ಜಾಹೀರಾತಿನಲ್ಲೂ ಕಾಣಿಸಿಕೊಂಡಿದ್ದಾಳೆ.

ಒಂದೆಡೆ ಯೋಗ, ಇನ್ನೊಂದೆಡೆ ಅಭಿನಯ ಮತ್ತು ನೃತ್ಯದ ಯೋಗಾಯೋಗ. ತನ್ವಿತಾ ನಾಡಿನ ಹೆಮ್ಮೆಯಾಗುವತ್ತ ದಾಪುನಡಿಗೆಯಲ್ಲಿ ಸಾಗುತ್ತಿದ್ದಾಳೆ.

ಪ್ರತಿಕ್ರಿಯಿಸಿ:
feedback@sudha.co.in

